**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ 19 ಎಸ್‌ಸಿಹೆಚ್(1)2013-14
**ಲಗತ್ತು:** ಅರ್ಜಿ ನಮೂನೆ-1 ಮತ್ತು
ಅನುಬಂಧ-1ಎ, 1ಬಿ

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560001.
ದಿನಾಂಕ: 07-08-2013

**-:: ಸುತ್ತೋಲೇ ::-**

**ವಿಷಯ:-** **2013-14**ನೇ ಸಾಲಿನಲ್ಲಿ ಅನುದಾನಿತ ಮತ್ತು ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ** ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂ:ಎಸ್‌ಡಬ್ಲ್ಯೂಎಲ್/229/ಬಿಸಿಎ/80, ದಿನಾಂಕ: 16/12/1982
2. ಸರ್ಕಾರದ ಆದೇಶ ಸಂ. ಇಡಿ 116 ಟಿಪಿಇ 97, ದಿ:17-06-2000.
3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂ. ಸಕಇ/ಇಡಿ3/ಸಿಆರ್-21/2010-11, ದಿ:14-01-2011.
4. ಸರ್ಕಾರದ ಆದೇಶ ಸಂ. ಸಕಇ 137 ಪವಯೋ 2011, ದಿ:08-08-2011.
5. ಸರ್ಕಾರದ ಆದೇಶ ಸಂ: ಸಕಇ 80 ಪಕವಿ 2013, ದಿ: 02-07-2013.

**-00000000-**

**2013-14**ನೇ ಸಾಲಿನಲ್ಲಿ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕೆ.ಇ.ಎ (ಸಿ.ಇ.ಟಿ) ಮೂಲಕ ಹಂಚಿಕೆಯಾಗಿ ಸೀಟು ಪಡೆದು ಬಿ.ಇ ವ್ಯಾಸಂಗ ಮಾಡುತ್ತಿರುವ **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ** ಕರ್ನಾಟಕದ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಶುಲ್ಕ ವಿನಾಯಿತಿಯನ್ನು ನೀಡಲು ಅರ್ಜಿಯನ್ನು ಕರೆಯಲಾಗಿದೆ. **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ,** ಭಾರತ ಸರ್ಕಾರದ ವಿದ್ಯಾರ್ಥಿ ವೇತನಕ್ಕೆ ಅರ್ಹತೆ ಇಲ್ಲದಿದ್ದರೆ, ಉಲ್ಲೇಖ(5)ರಂತೆ ಸಮಾಜ ಕಲ್ಯಾಣ ಇಲಾಖೆಯಿಂದ/ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶಾನಾಲಯದಿಂದ 2013-14ನೇ ಸಾಲಿಗೆ ಅನ್ವಯವಾಗುವಂತೆ ಕುಟುಂಬದ ವಾರ್ಷಿಕ ಆದಾಯ **₹2,00,000/-** ರಿಂದ **₹2,50,000/-** ಹೆಚ್ಚಿಸಿ ಪರಿಷ್ಕರಿಸಿರುವುದರಿಂದ ಈ ಮೊತ್ತವನ್ನು ಮೀರಿರುವ ಮತ್ತು ಯಾವುದೇ ವಿದ್ಯಾರ್ಥಿ ವೇತನ ಪಡೆಯದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಈ ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆ.

1. ಸಿ.ಇ.ಟಿ ಮುಖಾಂತರ ಆಯ್ಕೆಯಾದಂತಹ ಅರ್ಹ ವಿದ್ಯಾರ್ಥಿಗಳು ಪ್ರವೇಶ ಪಡೆದಿರುವ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲರು ಸೂಚನಾ ಫಲಕದಲ್ಲಿ ವಿದ್ಯಾರ್ಥಿಗಳಿಗೆ ಅರ್ಜಿಯನ್ನು ಸಲ್ಲಿಸಲು ಪ್ರಕಟಣೆಯನ್ನು ಪ್ರಚುರ ಪಡಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗೂ ಇಲಾಖೆಯಿಂದ ದೊರೆಯುವ ಈ ಸವಲತ್ತುಗಳ ಬಗ್ಗೆ ಅಗತ್ಯ ಮಾಹಿತಿಯನ್ನು ವಿಭಾಗದ ಮುಖ್ಯಸ್ಥರ ಅಥವಾ ಹಿರಿಯ ಬೋಧಕ ಸಿಬ್ಬಂದಿಯವರ ಸಹಕಾರದಿಂದ ತಲುಪುವ ರೀತಿಯಲ್ಲಿ, ಸೂಕ್ತ ವ್ಯವಸ್ಥೆ ಮಾಡತಕ್ಕದ್ದು. ವಿದ್ಯಾರ್ಥಿಗಳಿಗೆ ಮಾಹಿತಿ ಸಿಗದೇ, ಅರ್ಜಿ ಹಾಕಲು ಸಾಧ್ಯವಾಗಲಿಲ್ಲ ಎಂಬ ದೂರು ವಿದ್ಯಾರ್ಥಿಗಳಿಂದ ಬಾರದ ರೀತಿಯಲ್ಲಿ ಎಚ್ಚರವಹಿಸತಕ್ಕದ್ದು.

2. ವಿದ್ಯಾರ್ಥಿಗಳಿಂದ ಶುಲ್ಕ ವಿನಾಯಿತಿಗೆ ಪೂರ್ಣವಾಗಿ ತುಂಬಿದ ಅರ್ಜಿಯನ್ನು ದ್ವಿಪ್ರತಿಯಲ್ಲಿ ಪಡೆಯಬೇಕು. ಅರ್ಜಿಯ ಜೊತೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬಗ್ಗೆ ನಿಗಧಿಪಡಿಸಿದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳ ದೃಢೀಕರಣದೊಂದಿಗೆ ಈ ಪತ್ರದಲ್ಲಿ ತಿಳಿಸಿದ ಇತರೆ ದಾಖಲೆಗಳನ್ನು ಲಗತ್ತಿಸಿರಬೇಕು. ಒಂದು ಪ್ರತಿಯನ್ನು ಕಾಲೇಜಿನ ಕಛೇರಿಯಲ್ಲಿ ದಾಖಲಾತಿಗೆ ಇಟ್ಟುಕೊಂಡು ಮೂಲ ಅರ್ಜಿ (ಪ್ರಿನ್ಸಿಪಾಲರ ಶಿಫಾರಸ್ಸಿನೊಂದಿಗೆ) ಹಾಗೂ ಇತರೆ ಪ್ರಮಾಣ ಪತ್ರವನ್ನು ಈ ಕಛೇರಿಗೆ ಮಂಜೂರಾತಿಗಾಗಿ ಕಳುಹಿಸಿಕೊಡತಕ್ಕದ್ದು.

3. ಅರ್ಹ ವಿದ್ಯಾರ್ಥಿಗಳಿಂದ ಕಾಲೇಜುಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಲು ಮತ್ತು ಸಲ್ಲಿಸಲು ಅಂತಿಮ **ದಿನಾಂಕ :- 25-10-2013** ಎಂದು ನಿಗದಿಪಡಿಸಿಲಾಗಿದೆ. ನಿಗಧಿ ಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಬಾರದು. ಹಿಂದಿನ ಸಾಲಿನ ವರ್ಷಕ್ಕೆ ಸಂಬಂಧಿಸಿದಂತೆ ಶುಲ್ಕ ವಿನಾಯಿತಿಯ ಪ್ರಸ್ತಾವನೆಗಳನ್ನು ಪ್ರಸಕ್ತ ಸಾಲಿನಲ್ಲಿ ಪರಿಗಣಿಸಲಾಗುವುದಿಲ್ಲ. ಆದ್ದರಿಂದ ಹಿಂದಿನ ಸಾಲಿನ ಪ್ರಸ್ತಾವನೆಗಳನ್ನು ಕಳುಹಿಸಿ ಕೊಡಬಾರದು, ಇದನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು, ಒಂದು ವೇಳೆ ವಿದ್ಯಾರ್ಥಿಯು ಅರ್ಜಿಯನ್ನು ಸ್ವೀಕರಿಸಲೇಬೇಕೆಂದು ಒತ್ತಡ ತಂದಲ್ಲಿ ನಿರ್ದೇಶನಾಲಯದ ಆದೇಶವನ್ನು ಪಡೆಯಬೇಕೆಂದು ತಿಳಿಸುವುದು.

4. **ಕೆ.ಇ.ಎ (ಸಿ.ಇ.ಟಿ) ಪ್ರವೇಶವನ್ನು ಹೊರತುಪಡಿಸಿ, ಕಾಮೆಡ್-ಕೆ ಅಥಾವ ಆಡಳಿತ ಮಂಡಳಿಯ ಕೋಟಾದಲ್ಲಿ ಸೀಟು ಪಡೆದ ವಿದ್ಯಾರ್ಥಿಗಳು ಹಾಗೂ ಜಿ.ಓ.ಐ (Government of India) ಸೀಟು ಪಡೆದ ವಿದ್ಯಾರ್ಥಿಗಳು ಈ ಶುಲ್ಕ ವಿನಾಯಿತಿಗೆ ಅರ್ಹರಲ್ಲ. ಸರ್ಕಾರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಮತ್ತು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು, ಕಾಲೇಜುಗಳ ಪ್ರಾಂಶುಪಾಲರ ಹಂತದಲ್ಲಿಯೇ ಅನುಮೋದನೆ ಪಡೆದು ಶುಲ್ಕ ವಿನಾಯಿತಿಯನ್ನು ಪಡೆಯ ಬಹುದಾಗಿರುತ್ತದೆ.**

5. **ಎಂ.ಸಿ.ಎ/ಎಂ.ಬಿ.ಎ/ಎಂ.ಟೆಕ್ ಕೋರ್ಸುಗಳಿಗೆ ರಾಜ್ಯದ ವಿವಿಧ ಇಂಜನಿಯರಿಂಗ್ ಸಿ.ಇ.ಟಿ ಮುಖಾಂತರ ಪ್ರವೇಶ ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಲ್ಲಿ ಶುಲ್ಕ ಮರುಪಾವತಿಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ ಹಾಗೂ ಮಂಜೂರಾತಿಯನ್ನು ಪಡೆಯಬಹುದಾಗಿರುತ್ತದೆ. ಯಾವುದೇ ಕಾರಣಕ್ಕೂ ಈ ಇಲಾಖೆಯಲ್ಲಿ ಮಂಜೂರಾತಿಯನ್ನು ನೀಡಲು ಬರುವುದಿಲ್ಲ.**

6. ಸರ್ಕಾರದ ಮೇರಿಟ್ ಸೀಟು (ಕೆ.ಇ.ಎ ಮುಖಾಂತರ ಪ್ರವೇಶಾತಿ) ಪಡೆದ ಅರ್ಹ ಅಭ್ಯರ್ಥಿಗಳು ಮಾತ್ರ ಶುಲ್ಕ ವಿನಾಯಿತಿಗೆ ಅರ್ಹರಾಗಿರುವುದರಿಂದ ಪ್ರಸ್ತಾವನೆಗಳನ್ನು ಮಂಜೂರಾತಿಗೆ ಕಳುಹಿಸುವ ಮೊದಲು ಕೂಲಂಕುಷವಾಗಿ ಕೆಳಗೆ ನೀಡಿರುವ ಸೂಚನೆಯಾನುಸಾರ ಸಂಸ್ಥೆಯ ಮುಖ್ಯಸ್ಥರು ಪರಿಶೀಲಿಸಿ ವಿದ್ಯಾರ್ಥಿಗಳ ಅರ್ಜಿ ಮತ್ತು ಅಗತ್ಯವಾದ ದೃಢೀಕರಿಸಿದ ಪ್ರಮಾಣ ಪತ್ರಗಳನ್ನು ಕಳುಹಿಸಿಕೊಡಬೇಕು.

   ಅ. ವಿದ್ಯಾರ್ಥಿಗಳು ಸಲ್ಲಿಸುವ ಜೆರಾಕ್ಸ್ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯವರಿಂದ ದೃಢೀಕರಿಸಬೇಕು.

   ಆ. ವಿದ್ಯಾರ್ಥಿಗಳು ನಿಗಧಿಪಡಿಸಿರುವ ಅರ್ಜಿಯಲ್ಲಿಯೇ ಮಾಹಿತಿ ತುಂಬಿ ಸಲ್ಲಿಸಬೇಕು. ವಿದ್ಯಾರ್ಥಿಯು ಸ್ವತಃ ತಮ್ಮ ಬರವಣಿಗೆಯಲ್ಲಿ ತುಂಬಿದ ಅರ್ಜಿಯನ್ನು ಕಳುಹಿಸಿಕೊಡಬೇಕು(**ಜೆರಾಕ್ಸ್ ಪ್ರತಿ ಸಲ್ಲಿಸಬಾರದು**).

   ಇ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಜಾತಿ ಪ್ರಮಾಣ ಪತ್ರದ ಪ್ರತಿ ಸಲ್ಲಿಸಬೇಕು ಮತ್ತು ವಿದ್ಯಾರ್ಥಿಗಳು **ಸಮಾಜ ಕಲ್ಯಾಣ ಇಲಾಖೆ (ಕುಟುಂಬದ ವಾರ್ಷಿಕ ಆದಾಯ ₹2.50 ಲಕ್ಷ ಮೀರದ) ಅಥವಾ ತಾಂತ್ರಿಕ ಶಿಕ್ಷಣ ಇಲಾಖೆ (ಕುಟುಂಬದ ವಾರ್ಷಿಕ ಆದಾಯ ₹2.50 ಲಕ್ಷಕ್ಕಿಂತ ಮಿರೀದ)** ಯಡಿಯಲ್ಲಿ ಶುಲ್ಕ ವಿನಾಯಿತಿಯನ್ನು ಪಡೆಯುವಸಲುವಾಗಿ ವಾರ್ಷಿಕ ಆದಾಯ ಪ್ರಮಾಣ ಪತ್ರವನ್ನು (ಸಂಬಂಧಪಟ್ಟ ತಹಸೀಲ್ದಾರ್ ರವರಿಂದ ಪಡೆದ ಆದಾಯ ಪ್ರಮಾಣ ಪತ್ರ) ಸಲ್ಲಿಸ ಬೇಕಾಗಿರುತ್ತದೆ.

   ಈ. ಪ್ರತಿಯೊಬ್ಬ ವಿದ್ಯಾರ್ಥಿಯು ಶುಲ್ಕ ವಿನಾಯಿತಿಗೆ ಅರ್ಜಿ ಸಲ್ಲಿಸುವಾಗ ಸರ್ಕಾರಿ ಕೋಟಾದಲ್ಲಿ ಪ್ರವೇಶ ಪಡೆದ ಬಗ್ಗೆ ಸಿ.ಇ.ಟಿ ಪ್ರವೇಶ ಹಂಚಿಕೆ ಪತ್ರ **(C.E.T Admission Order)** ಲಗತ್ತಿಸಬೇಕು. ಪ್ರವೇಶ ಪರೀಕ್ಷೆಯ ಅಡ್ಮಿಷನ್ ಟಿಕೇಟ್ ಅನ್ನು ಅಂಗೀಕರಿಸಲಾಗುವಿದಿಲ್ಲ.

   ಉ. ವಿದ್ಯಾರ್ಥಿಯು ಬಿ.ಇ ವ್ಯಾಸಂಗ ಮುಂದುವರಿಸದೆ ಮೊಟಕುಗೊಳಿಸಿದ ಸಂದರ್ಭದಲ್ಲಿ ವಿವರವನ್ನು ಹಾಗೂ ಕಾರಣವನ್ನು ಅರ್ಜಿಯಲ್ಲಿ ನಮೂದಿಸಿರಬೇಕು. ವಿದ್ಯಾರ್ಥಿಯಿಂದ ಪ್ರತ್ಯೇಕವಾದ ವಿವರಣೆ ಪತ್ರವನ್ನು ಮತ್ತು ಪ್ರಿನ್ಸಿಪಾಲರು ಶಿಫಾರಸ್ಸು ಸಹ ಲಗತ್ತಿಸಬೇಕು.

ಊ. ವಿದ್ಯಾರ್ಥಿಯ ತಂದೆ/ತಾಯಿ/ಪೋಷಕರು ಸರ್ಕಾರಿ/ ಸರ್ಕಾರದ ಉದ್ದಿಮೆ/ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ, ಅವರು ಕಾರ್ಯನಿರ್ವಹಿಸುವ ಕಛೇರಿಯಿಂದ ನೀಡುವ ಆದಾಯ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು. ಪತ್ರಾಂಕಿತ ಅಧಿಕಾರಿಗಳಾಗಿದ್ದು ಎ.ಜಿ ಕಛೇರಿಯವರು ನೀಡಿರುವ ಪೇಸ್ಲಿಪ್‌ನ ಪ್ರತಿಯನ್ನು ನೀಡಬಹುದು. ಖಾಸಗಿ/ಸ್ವ-ಉದ್ಯೋಗದಲ್ಲಿರುವವರು ಸಂಬಂಧ ಪಟ್ಟ ತಹಸೀಲ್ದಾರ್‌ರಿಂದ ಆದಾಯ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು. ಪಿಂಚಣಿದಾರರು ಪಿಂಚಣಿ ಆದೇಶದ ಪ್ರತಿ ಅಥವಾ ಖಜಾನೆಯ ಮಸ್ತಕದಲ್ಲಿ ನಮೂದಿಸಿರುವ ಪಿಂಚಣಿ ಪಾವತಿಯ ವಿವರದ ಪ್ರತಿ ಅಥವಾ ಪಿಂಚಣಿಯನ್ನು ಬ್ಯಾಂಕಿನಿಂದ ಪಡೆಯುತ್ತಿದ್ದರೆ ಆ ಬ್ಯಾಂಕ್‌ನ ಮ್ಯಾನೇಜರ್ ಅವರಿಂದ ಪಿಂಚಣಿ ದೃಢೀಕರಣ ಪ್ರಮಾಣ ಪತ್ರವನ್ನು ಸಲ್ಲಿಬೇಕು. ವಿದ್ಯಾರ್ಥಿಯ ತಂದೆ/ತಾಯಿ ಮರಣ ಹೊಂದಿದ್ದರೆ, ಮರಣ ಪ್ರಮಾಣ ಪತ್ರವನ್ನು ಲಗತ್ತಿಸಿ, ಮೇಲೆ ತಿಳಿಸಿದಂತೆ ಪೋಷಕರ ಆದಾಯ ಪತ್ರ ಸಲ್ಲಿಸಬೇಕು.

ಋ. ವಿದ್ಯಾರ್ಥಿಯ ಸದ್ವರ್ತನೆ ಹಾಗೂ ನಿಯತ ಹಾಜರಾತಿಯನ್ನು ಗಮನಿಸಿ ಪ್ರತಿಯೊಂದು ವಿದ್ಯಾರ್ಥಿಯ ಅರ್ಜಿಯಡಿಯಲ್ಲಿ ಪ್ರಿನ್ಸಿಪಾಲರು ಲಿಖಿತವಾಗಿ ಶಿಫಾರಸ್ಸು ಮಾಡಿ ತಪ್ಪದೇ ಸಹಿಮಾಡಿ ಮೊಹರು ಹಾಕಿರಬೇಕು.

ಎ. ವಿದ್ಯಾರ್ಥಿಯು ಕೆಳಕಂಡಂತೆ ಹಿಂದಿನ ವರ್ಷದ ಎಲ್ಲಾ ಅಂಕಪಟ್ಟಿಗಳ (ಪೂರಕ ಪರೀಕ್ಷೆಯು ಸೇರಿದಂತೆ) ಪ್ರತಿಯನ್ನು ಪ್ರತ್ಯೇಕವಾಗಿ ಲಗತ್ತಿಸಿರಬೇಕು. ವಿದ್ಯಾರ್ಥಿಯು ಯಾವುದೇ ಸೆಮಿಸ್ಟರ್‌ನ ಅಂಕಪಟ್ಟಿಯು ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ಬಂದಿಲ್ಲದ ಸಂದರ್ಭದಲ್ಲಿ ಕಾಂಪ್ಯೂಟರ್‌ನಲ್ಲಿ ಪಡೆದ ಆ ವಿದ್ಯಾರ್ಥಿಗೆ ಸಂಬಂಧಿಸಿದಂತೆ ಫಲಿತಾಂಶದ ಪ್ರತಿಯನ್ನು ಪ್ರಾಂಶುಪಾಲರು ದೃಢೀಕರಿಸಿ ಲಗತ್ತಿಸಬಹುದು, ಅಥವಾ ಫಲಿತಾಂಶದ ಆಧಾರದ ಮೇಲೆ, ಅಂಕಪಟ್ಟಿಯ ನಮೂನೆಯಲ್ಲಿ ವಿದ್ಯಾರ್ಥಿ ಪಡೆದ ಅಂಕಗಳ ವಿವರ ಪ್ರಿನ್ಸಿಪಾಲರಿಂದ ದೃಢೀಕರಿಸಿಕೊಂಡು ಸಲ್ಲಿಸಬಹುದು.

| ವ್ಯಾಸಂಗ ಮಾಡುತ್ತಿರುವ ವರ್ಷ | | | ಸಲ್ಲಿಸಬೇಕಾದ ಅಂಕಪಟ್ಟಿಗಳು |
|---|---|---|---|
| 1) | 1ನೇ ವರ್ಷ ಬಿ.ಇ | – | ಪಿ.ಯು.ಸಿ ಹಾಗೂ ಎಸ್.ಎಸ್.ಎಲ್.ಸಿ ಅಂಕಪಟ್ಟಿ |
| 2) | 2ನೇ ವರ್ಷ ಬಿ.ಇ | – | 1 ಮತ್ತು 2ನೇ ಸೆಮಿಸ್ಟರ್‌ನ ಅಂಕಪಟ್ಟಿಗಳು |
| 3) | 3ನೇ ವರ್ಷ ಬಿ.ಇ | – | 1,2,3 ಮತ್ತು 4ನೇ ಸೆಮಿಸ್ಟರ್‌ನ ಅಂಕಪಟ್ಟಿಗಳು |
| 4) | 4ನೇ ವರ್ಷ ಬಿ.ಇ | – | 1,2,3,4,5 ಮತ್ತು 6ನೇ ಸೆಮಿಸ್ಟರ್‌ನ ಅಂಕಪಟ್ಟಿಗಳು |

6. **ಪ್ರಸಕ್ತ ಸಾಲಿನಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಕಳುಹಿಸಿಕೊಡಬೇಕು**. ಅಂದರೆ ಅಂತಿಮ ದಿನಾಂಕದೊಳಗೆ ಬಂದ ಅರ್ಹರಾದ ಪರಿಶಿಷ್ಟ ಜಾತಿಗೆ ಸೇರಿದ ಎಲ್ಲಾ ವಿದ್ಯಾರ್ಥಿಗಳ ಹೆಸರನ್ನು ಲಗತ್ತಿಸಿರುವ ಅನುಬಂಧ-1ಎ ರಲ್ಲಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಎಲ್ಲಾ ವಿದ್ಯಾರ್ಥಿಗಳ ಹೆಸರನ್ನು ಲಗತ್ತಿಸಿರುವ ಅನುಬಂಧ-1ಬಿ ರಲ್ಲಿ ಪಟ್ಟಿ ಮಾಡಿ ಪ್ರತ್ಯೇಕವಾಗಿ ದ್ವಿ-ಪ್ರತಿಗಳಲ್ಲಿ ಕಳುಹಿಸಿಕೊಡಬೇಕು ಪ್ರತಿಯೊಂದು ಪ್ರತಿಯ ಮೇಲೆ ಪ್ರಿನ್ಸಿಪಾಲರ ಸಹಿ (ಫ್ಯಾಸಿಮಿಲಿ ಸಹಿ ಹಾಕಬಾರದು) ಹಾಗೂ ಮೊಹರು ಹಾಕಿರಬೇಕು. (ಜೆರಾಕ್ಸ್ ಅಂಗೀಕರಿಸಲಾಗುವುದಿಲ್ಲ) ಪ್ರತಿಯೊಂದು ಪ್ರತಿಯಲ್ಲಿಯೂ ಎಲ್ಲಾ ಪ್ರಮಾಣ ಪತ್ರಗಳನ್ನು ಧೃಡೀಕರಿಸಬೇಕು. ಪ್ರಸ್ತಾವನೆಯನ್ನು ಒಬ್ಬೊಬ್ಬ ವಿದ್ಯಾರ್ಥಿಗೆ ಪ್ರತ್ಯೇಕ ಪ್ರಸ್ತಾವನೆಯನ್ನು ಬಿಡಿ ಬಿಡಿಯಾಗಿ ಸಲ್ಲಿಸಿದ್ದಲ್ಲಿ ತಿರಸ್ಕರಿಸಲಾಗುವುದು, ಇದರಿಂದ ಉಂಟಾಗುವ ವಿಳಂಬಕ್ಕೆ ಮತ್ತು **ಮೀಸಲಾತಿ ವರ್ಗದ ವಿದ್ಯಾರ್ಥಿಗಳಿಗೆ ಕೈತಪ್ಪುವುದರಿಂದ ಶುಲ್ಕ ವಿನಾಯಿತಿಗೆ ಆಯಾ ಸಂಸ್ಥೆಯವರೇ ಪೂರ್ಣ ಜವಾಬ್ದಾರಾಗುತ್ತಾರೆ.**

7. ಪ್ರಸಕ್ತ ಸಾಲಿನಲ್ಲಿ ಮಂಜೂರಾತಿ ವಿಧಾನವನ್ನು ಪರಿಷ್ಕರಿಸಲಾಗಿರುತ್ತದೆ. ಪ್ಯಾರ-6 ರಲ್ಲಿನ **ಅನುಬಂಧ-1ಎ ಮತ್ತು 1ಬಿ** ನಲ್ಲಿ ಕಾಣಿಸಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಯಥಾವತ್ತು ಲಗತ್ತಿಸಿರುವ **Annexure** ಪ್ರಕಾರ **MS-Excel** ನಲ್ಲಿ ತಯಾರಿಸಿ ಸಿ.ಡಿ **(CD)** ಯಲ್ಲಿ ತುಂಬಿ, ಅದರ ಮೇಲೆ ಸಂಸ್ಥೆಯ ಹೆಸರನ್ನು ಬರೆದಿರಬೇಕು, ಅದನ್ನು ಮಾತ್ರ **ಸಹಾಯಕ ನಿರ್ದೇಶಕರು (ಎಸಿಎಂ), ಕೊಠಡಿ ಸಂಖ್ಯೆ. 406, 4ನೇ ಮಹಡಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಅರಮನೆ ರಸ್ತೆ, ಬೆಂಗಳೂರು-560 001,** ಇವರಿಗೆ ಪ್ರತ್ಯೇಕವಾಗಿ ಕಳುಹಿಸಿಕೊಡಬೇಕು ಹಾಗೂ E-Mail ID:- **dteacmsection@yahoo.com** ಗೂ ಸಹ ಇ-ಮೇಲ್ ಕಳುಹಿಸಿರಬೇಕು.

8. ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ ಮಂಜೂರಾತಿಗೆ ಸಂಬಂಧಿಸಿದಂತೆ, **ಅರ್ಜಿ ಸಲ್ಲಿಸುವ ವಿಧಾನ, ಶಿಫಾರಸ್ಸು ಮಾಡಿದ್ದು,** ಮಂಜೂರಾತಿಯಾದ ಅಥವಾ ಮಂಜೂರಾತಿಯಾಗದ ಆಕ್ಷೇಪಣೆಗಳ ಬಗ್ಗೆ ಕೆಲವು ಕಾಲೇಜಿನವರು ಸೂಚನಾ ಫಲಕಗಳಲ್ಲಿ ಪ್ರಚುರ ಪಡಿಸದೆ, ತಿಳಿಸದೆ ಅಂತಹ ಎಲ್ಲಾ ವಿದ್ಯಾರ್ಥಿಗಳನ್ನು ಈ ನಿರ್ದೇಶನಾಲಯಕ್ಕೆ ನೇರವಾಗಿ ಕಳುಹಿಸುತ್ತಿರುವುದು, ಮಂಜೂರಾತಿಯಾದ ಹಣವನ್ನು ಸರಿಯಾಗಿ ಪಾವತಿಸದಿರುವುದು ಪೂರ್ಣ ಮಾಹಿತಿ ನೀಡದೆ ಶುಲ್ಕ ಕಟ್ಟಲು ಒತ್ತಾಯಿಸುವುದು ನಿರ್ದೇಶಕರ ಗಮನಕ್ಕೆ ಬಂದಿದೆ, ಇಂತಹ ಪ್ರಕರಣಗಳು ಬಾರದ ರೀತಿಯಲ್ಲಿ ಆಯಾ ಕಾಲೇಜಿನ ಪ್ರಿನ್ಸಿಪಾಲರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

9. ಶುಲ್ಕ ವಿನಾಯಿತಿಗೆ ವಿದ್ಯಾರ್ಥಿಗಳ ಅರ್ಜಿಗಳನ್ನು ಲಗತ್ತಿಸಿರುವ ಪ್ರಸ್ತಾವನೆಯನ್ನು ಈ ಕಛೇರಿಗೆ ಅನುಮೋದನೆಗಾಗಿ ಕಳುಹಿಸಲು **ದಿನಾಂಕ: 30-10-2013** ರಂದು ಅಂತಿಮ ದಿನಾಂಕವೆಂದು ನಿಗಧಿಪಡಿಸಿದೆ. ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಹಾಗೂ ಉಲ್ಲೇಖದಲ್ಲಿನ ಸರ್ಕಾರದ ಆದೇಶದ ಪ್ರಕಾರ ತಿರಸ್ಕರಿಸಲಾಗುವುದು.

10. ನಿರ್ದೇಶನಾಲಯದಿಂದ ಚೆಕ್ ಮತ್ತು ವಿದ್ಯಾರ್ಥಿಗಳಿಗೆ ಮಂಜೂರಾತಿ ನೀಡಿದ ಪಟ್ಟಿಯನ್ನು ಸಂಸ್ಥೆಗೆ ಕಳುಹಿಸಲಾಗುವುದು. ವಿದ್ಯಾರ್ಥಿಗಳ ಪಟ್ಟಿಯನ್ನು ಕಾಲೇಜಿಗೆ ಬಂದ ನಂತರ ಸೂಚನಾ ಫಲಕಗಳಲ್ಲಿ ಪ್ರಚುರ ಪಡಿಸಿ ವಿದ್ಯಾರ್ಥಿಗಳ ಹಣವನ್ನು ಪಡೆಯಲು **15 ದಿನಗಳ** ಕಾಲಾವಕಾಶ ಕೊಡಬೇಕು. ವಿದ್ಯಾರ್ಥಿಗೆ ಶುಲ್ಕ ವಿನಾಯಿತಿಯ ಮೊತ್ತವನ್ನು ವಿತರಣೆಯಾದ ಬಗ್ಗೆ ವಿದ್ಯಾರ್ಥಿಗಳಿಂದ ಸಹಿ ಪಡೆದ ದ್ವಿಪ್ರತಿಯಲ್ಲಿನ ರಸೀದಿಯಲ್ಲಿ ಒಂದನ್ನು ಅಂದರೆ ಮೂಲ ರಸೀದಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸಿಕೊಡಬೇಕು. ಇನ್ನೊಂದು ಪ್ರತಿಯನ್ನು ದಾಖಲೆಗಾಗಿ ಹಾಗೂ ಪರಿಶೀಲನೆಗಾಗಿ ನಿಮ್ಮ ಸಂಸ್ಥೆಯಲ್ಲಿ ಇಟ್ಟುಕೊಳ್ಳಬೇಕು.

ಗೊತ್ತುಪಡಿಸಿದ ದಿನಾಂಕವಾದ ಅಥವಾ ಒಂದು ತಿಂಗಳ ಒಳಗಾಗಿ ಸ್ವೀಕೃತಿ ಮತ್ತು ಮೇಲೆ ಪಾವತಿ ಮಾಡದೇ ಉಳಿದ ಹಣವನ್ನು ಸಮಾಜ ಕಲ್ಯಾಣ ಇಲಾಖೆಯ ಅನುದಾನದಲ್ಲಿ ಮಂಜೂರಾತಿ ಪಡೆದಿದ್ದಲ್ಲಿ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಹೆಸರಿಗೆ ಚೆಕ್ ಮೂಲಕ ಹಿಂತಿರುಗಿಸತಕ್ಕದ್ದು, ತಾಂತ್ರಿಕ ಶಿಕ್ಷಣ ಇಲಾಖೆಯ ಆಯವ್ಯಯದಲ್ಲಿ ಮಂಜೂರಾತಿ ಪಡೆದಿದ್ದಲ್ಲಿ, ಆ ಹಣವನ್ನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಹೆಸರಿಗೆ ಚೆಕ್ಕನ್ನು ಹಾಗೂ ಪಾವತಿಯಾಗದಿದ್ದ ವಿದ್ಯಾರ್ಥಿಗಳ ಹೆಸರು, ತರಗತಿ ವಿಭಾಗ ಮತ್ತು ಪಾವತಿ ಮಾಡಲು ಸಾಧ್ಯವಾಗುದುದ್ದಕ್ಕೆ ಕಾರಣವನ್ನು ತಿಳಿಸಿ ವಿವರಣಾ ಪಟ್ಟಿಯನ್ನು ಈ ನಿರ್ದೇಶನಾಲಯಕ್ಕೆ ಕಳುಹಿಸಬೇಕು.

ಮಂಜೂರಾತಿ ನೀಡಿ ಪಟ್ಟಿಯನ್ನು ಕಳುಹಿಸಿಕೊಟ್ಟಾಗ ಆ ಪಟ್ಟಿಯಲ್ಲಿ ಮಂಜೂರಾತಿಯಾಗದೇ ಅಕ್ಷೆಪಣೆಯಿಂದ ಕೂಡಿದ ವಿದ್ಯಾರ್ಥಿಗಳಿಗೆ ಕೂಡಲೇ ವಿಷಯವನ್ನು ತಿಳಿಸಿ ಅಥವಾ ಪ್ರಕಟಿಸಿ, 15 ದಿವಸಗಳೊಳಗಾಗಿ ಅಕ್ಷೇಪಣೆಯನ್ನು ಸರಿಪಡಿಸಿ ಕಳುಹಿಸಿಕೊಡತಕ್ಕದ್ದು.

11. ಮಂಜೂರಾತಿಯಲ್ಲಿ ವಿಳಂಬವನ್ನು ತಪ್ಪಿಸಲು ನೀಡಿರುವ ತಿಳುವಳಿಕೆಗೆ ಅನುಗುಣವಾಗಿ ಅರ್ಜಿಗಳನ್ನು ಮತ್ತು ದಾಖಲಾತಿಗಳನ್ನು ಸಂಸ್ಥೆಯವರು ಪರಿಶೀಲಿಸಿ ಸರಿಯಾಗಿ ನೀಡಲಾಗಿದೆ ಎಂದು ತಿಳಿದು ಬಂದಲ್ಲಿ ಪ್ರಸ್ತಾವನೆಯನ್ನು ಸಂಬಂದಪಟ್ಟ ಪ್ರಮಾಣ ಪತ್ರಗಳೊಡನೆ ನಿಗಧಿಪಡಿಸಿದ ದಿನಾಂಕ ಅಂದರೆ **30-10-2013** ರೊಳಗೆ ಈ ಕಛೇರಿಗೆ ತಲುಪುವಂತೆ ಕಳುಹಿಸಿಕೊಡಬೇಕು.

12. ಅರ್ಜಿ ಮತ್ತು ಪ್ರಸ್ತಾವನೆಯನ್ನು ಪ್ರತಿಯೊಬ್ಬ ವಿದ್ಯಾರ್ಥಿಯ ಬಳಿ ಪ್ರತ್ಯೇಕವಾಗಿ ಕಳುಹಿಸ ಕೂಡದೆಂದು ಕಡ್ಡಾಯವಾಗಿ ತಿಳಿಸಲಾಗಿದೆ. ಹಾಗೂ ನಿಗಧಿತ ಅವಧಿಯ ನಂತರ ಯಾವುದೇ ಕಾರಣಕ್ಕೂ ಅರ್ಜಿಯನ್ನು ಸಲ್ಲಿಸಬಾರದು. ಇದನ್ನು ಉಲ್ಲಂಘಿಸಿದ ಸಂಸ್ಥೆಯವರ ಶುಲ್ಕ ಮರುಪಾವತಿಯ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದಿಲ್ಲ.

***ವಿಶೇಷ ಸೂಚನೆ*** :-

ಶಿಕ್ಷಣ ಸಂಸ್ಥೆಯವರು ಪ್ರಸ್ತಾವನೆಯನ್ನು ಅನುಬಂಧ-1ಎ ಮತ್ತು 1ಬಿ ರಲ್ಲಿ ದ್ವಿ-ಪ್ರತಿಗಳಲ್ಲಿ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಿ ವಿದ್ಯಾರ್ಥಿಯ ಅರ್ಜಿ ಸೇರಿದಂತೆ ಈ ಕೆಳಕಂಡ ಅವಶ್ಯಕ ಪ್ರಮಾಣ ಪತ್ರ ದೃಢೀಕರಿಸಿದ ಪ್ರತಿಯನ್ನು ತಪ್ಪದೇ ಸಲ್ಲಿಸಬೇಕು.

ಅ). ಜಾತಿ ಪ್ರಮಾಣ ಪತ್ರದ ಪ್ರತಿ ಮತ್ತು ವಾರ್ಷಿಕ ಆದಾಯ ಪ್ರಮಾಣ ಪತ್ರ.

ಆ). ತಂದೆ/ತಾಯಿ/ಪೋಷಕರ ವೇತನ ದೃಢೀಕರಣ(ಪ್ಯಾರ–5 (ಊ)ರಂತೆ).

ಇ). ತಂದೆ/ತಾಯಿ ಮೃತ ಹೊಂದಿದ್ದರೆ ಮರಣ ಪ್ರಮಾಣ ಪತ್ರದ ಪ್ರತಿ.

ಈ). ಕೆ.ಇ.ಎ (ಸಿ.ಇ.ಟಿ) ಕೋಟಾದಡಿ ಪ್ರವೇಶ ಪಡೆದ ಹಂಚಿಕೆ ಪತ್ರ ಸಲ್ಲಿಸಬೇಕು.
(ಅನುದಾನಿತ/ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರಿ ಕೋಟಾ ಸೀಟು).

ಉ). ಅಭ್ಯರ್ಥಿಯ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಈ ಕೆಳಗೆ ನಮೂದಿಸಿರುವಂತೆ.

| ವ್ಯಾಸಂಗ ಮಾಡುತ್ತಿರುವ ವರ್ಷ | | | ಸಲ್ಲಿಸಬೇಕಾದ ಅಂಕಪಟ್ಟಿಗಳು |
|---|---|---|---|
| 1). | 1ನೇ ವರ್ಷ ಬಿ.ಇ | – | ಪಿ.ಯು.ಸಿ ಹಾಗೂ ಎಸ್.ಎಸ್.ಎಲ್.ಸಿ ಅಂಕಪಟ್ಟಿ |
| 2). | 2ನೇ ವರ್ಷ ಬಿ.ಇ | – | 1 ಮತ್ತು 2ನೇ ಸೆಮಿಸ್ಟರ್‌ನ ಅಂಕಪಟ್ಟಿಗಳು |
| 3). | 3ನೇ ವರ್ಷ ಬಿ.ಇ | – | 1,2,3 ಮತ್ತು 4ನೇ ಸೆಮಿಸ್ಟರ್‌ನ ಅಂಕಪಟ್ಟಿಗಳು |
| 4). | 4ನೇ ವರ್ಷ ಬಿ.ಇ | – | 1,2,3,4,5 ಮತ್ತು 6ನೇ ಸೆಮಿಸ್ಟರ್‌ನ ಅಂಕಪಟ್ಟಿಗಳು |

**ಅಪೂರ್ಣವಾದ ಅರ್ಜಿ, ವಿದ್ಯಾರ್ಥಿಯ ಹಾಗೂ ತಂದೆ/ತಾಯಿ, ಪೋಷಕರ ಸಹಿಯಿಲ್ಲದ, ಪ್ರಿನ್ಸಿಪಾಲರ ಸಹಿ, ಮೊಹರು ಹೊಂದಿಲ್ಲದ ಮತ್ತು ಅವಶ್ಯಕ ಪ್ರಮಾಣ ಪತ್ರದ ಪ್ರತಿ ಲಗತ್ತಿಸದೇ ಇದ್ದ ಪಕ್ಷದಲ್ಲಿ ನಿಗಧಿಪಡಿಸಿದ ದಿನಾಂಕದ ನಂತರ ತಡವಾಗಿ ಬಂದಂತಹ ವಿದ್ಯಾರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು. ಈ ಕಾರಣಗಳಿಗಾಗಿ ವಿದ್ಯಾರ್ಥಿಗೆ ಶುಲ್ಕ ವಿನಾಯಿತಿ ಕೈ–ತಪ್ಪಿದಲ್ಲಿ ಈ ಇಲಾಖೆಯು ಜವಾಬ್ದಾರಿಯಾಗುವುದಿಲ್ಲ.**

***ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕವನ್ನು ಪಾವತಿಸಲು ಯಾವುದೇ ಕಾರಣಕ್ಕೂ ಒತ್ತಾಯಿಸಬಾರದಾಗಿ ಕಡ್ಡಾಯವಾಗಿ ತಿಳಿಸಲಾಗಿದೆ.***

**ಎಂ.ಬಿ.ಎ,ಎಂ.ಸಿ.ಎ,ಎಂ.ಟೆಕ್ ಮತ್ತು ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಇಲಾಖೆಯವತಿಯಿಂದ ಯಾವುದೇ ರೀತಿಯ ಶುಲ್ಕ ವಿನಾಯಿತಿಯನ್ನಾಗಲಿ ಮತ್ತು ವಿದ್ಯಾರ್ಥಿ ವೇತನವನ್ನಾಗಲಿ ಮಂಜೂರು ಮಾಡಲಾಗುವುದಿಲ್ಲ. ಆದ ಕಾರಣ ಸದರಿ ವಿದ್ಯಾರ್ಥಿಯ ಅರ್ಜಿಗಳನ್ನು ಈ ಕಛೇರಿಗೆ ಕಳುಹಿಸಬಾರದಾಗಿ ಸೂಚಿಸಲಾಗಿದೆ.**

**ಶುಲ್ಕ ವಿನಾಯಿತಿಗೆ ಸಂಬಂಧಿಸಿದ ವಿವರ, ಅರ್ಜಿ ನಮೂನೆ ಮತ್ತು ಅನುಬಂಧಗಳನ್ನು ಈ ಇಲಾಖೆಯ ಕೆಳಕಂಡ ವೆಬ್‌ಸೈಟ್‌ನಲ್ಲಿ ಪಡೆಯಬಹುದು.**

***http:-* dte.kar.nic.in**

2/5/13

ಸಹ ನಿರ್ದೇಶಕರು(ಆ)

*ಇವರಿಗೆ:–*

1. ಪ್ರಿನ್ಸಿಪಾಲರು, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು ಇವರ ಗಮನಕ್ಕಾಗಿ ಹಾಗೂ ಮುಂದಿನ ಕ್ರಮಕ್ಕಾಗಿ. ಈ ಸುತ್ತೋಲೆಯನ್ನು ವಿದ್ಯಾರ್ಥಿಗಳ ಮಾಹಿತಿ ಮತ್ತು ಗಮನಕ್ಕಾಗಿ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
2. ಈ ನಿರ್ದೇಶನಾಲಯಕ್ಕೆ ಸೂಚನಾ ಫಲಕಕ್ಕೆ.
3. ಬಿ.ಯು.ಡಿ ವಿಭಾಗಕ್ಕೆ.
4. ನಗದು ವಿಭಾಗಕ್ಕೆ ಮಾಹಿತಿಗಾಗಿ.
5. ಪಿ.ಆರ್.ಓ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
6. ಸಂಯೋಜನಾಧಿಕಾರಿಯವರು, ಇ–ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

## ಅರ್ಜಿ ನಮೂನೆ-೧

**ಕಾಲೇಜಿನ ಹೆಸರು:-** ______________________________ ವರ್ಷ **2013-14**

ತಂದೆ ತಾಯಿಯರ ವಾರ್ಷಿಕ ವರಮಾನ **₹2,50,000/-**ಕ್ಕಿಂತ ಜಾಸ್ತಿ ಇದ್ದು, ಭಾರತ ಸರ್ಕಾರದ ವಿದ್ಯಾರ್ಥಿವೇತನ ಲಭ್ಯವಿಲ್ಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರಾತಿಗಾಗಿ ಸಲ್ಲಿಸುವ ಅರ್ಜಿ.

1. ವಿದ್ಯಾರ್ಥಿಯ ಹೆಸರು (ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯಲ್ಲಿರುವಂತೆ) :
2. ತಂದೆ/ತಾಯಿ/ಪೋಷಕರ ಹೆಸರು ಮತ್ತು ವಿಳಾಸ (ತಂದೆ/ತಾಯಿ ಮರಣ ಹೊಂದಿದ್ದರೆ, ಮರಣ ಪತ್ರವನ್ನು ಲಗತ್ತಿಸಬೇಕು) :
3. ವಿದ್ಯಾರ್ಥಿಯು ಯಾವ ಕೋಟಾದಲ್ಲಿ ಪ್ರವೇಶ ಪಡೆದಿರುತ್ತಾರೆ. (ಸೀಟು ಹಂಚಿಕೆ ಪತ್ರ ಲಗತ್ತಿಸಿರಬೇಕು) :
4. ಕರ್ನಾಟಕದಲ್ಲಿ ಖಾಯಂ ವಾಸಸ್ಥಳದವರಾಗಿರುವರೇ ? (ಹೌದು/ಇಲ್ಲ) ಎಂದು ಉತ್ತರಿಸಬೇಕು. :
5. ಕುಟುಂಬದ ವಾರ್ಷಿಕ ವರಮಾನ :
   1. ವರಮಾನದ ಮೂಲ
   2. ವಾರ್ಷಿಕ ವರಮಾನ ಒಟ್ಟು ಮೊಬಲಗು
6. ವಿದ್ಯಾರ್ಥಿಯು ಈ ಶೈಕ್ಷಣಿಕ ವರ್ಷದಲ್ಲಿ ಓದುತ್ತಿರುವ ಕೋರ್ಸ್ ಮತ್ತು ವರ್ಷ :
7. ಬಿ.ಇ ವಿದ್ಯಾಭ್ಯಾಸದ ಅವಧಿಯಲ್ಲಿ ಅನುತ್ತೀರ್ಣತೆ ಅಥವಾ ಬೇರೆ ಯಾವುದೇ ಕಾರಣಕ್ಕೆ ಮಧ್ಯದಲ್ಲಿ ಮೊಟಕುಗೊಂಡಿದ್ದರೆ ಆ ಅವಧಿ ಮತ್ತು ಕಾರಣ ತಿಳಿಸಬೇಕು :
8. ವಿದ್ಯಾರ್ಥಿಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಯಾವ ಗುಂಪಿಗೆ ಸೇರಿದವರು? :
9. ವಿದ್ಯಾರ್ಥಿಗೆ ಈ ಹಿಂದಿನ ವರ್ಷದಲ್ಲಿ ಅದೇ ವಿನಾಯಿತಿ ಬರುತ್ತಿತ್ತೇ ? :
   1. ಇಲ್ಲದಿದ್ದಲ್ಲಿ ಕಾರಣ
   2. ಬರುತ್ತಿದ್ದರೆ ಹಿಂದಿನ ವರ್ಷದಲ್ಲಿ ಮಂಜೂರು ಮಾಡಿದ್ದ ಆದೇಶ ಸಂಖ್ಯೆ, ದಿನಾಂಕ ಮತ್ತು ಮೊಬಲಗು.
10. ವಿದ್ಯಾರ್ಥಿಯು ಮುಂದಿನ ತರಗತಿಗೆ ತೇರ್ಗಡೆಯಾಗಿದ್ದಾನೆಯೇ ? :

| ಕ್ರ ಸಂ | ದಾಖಲೆ | ಲಗತ್ತಿಸಿದೆ (ಹೌದು/ಇಲ್ಲ) |
|---|---|---|
| 1. | ಸರ್ಕಾರಿ ಕೋಟಾದಲ್ಲಿ ಸೀಟು ಪಡೆದ ಬಗ್ಗೆ ಸಿ.ಇ.ಟಿ ಸೀಟು ಹಂಚಿಕೆ ಪತ್ರ | |
| 2. | ಆದಾಯ ಪತ್ರ (ಸುತ್ತೋಲೆಯ ಪ್ಯಾರಾ 5(ಊ) ರಂತೆ ) | |
| 3. | ಜಾತಿ ಪ್ರಮಾಣ ಪತ್ರ | |
| 4. | ತಂದೆ/ತಾಯಿ ಮೃತರಾಗಿದ್ದರೆ, ಮರಣ ಪ್ರಮಾಣ ಪತ್ರ | |
| 5. | ಹಿಂದಿನ ವರ್ಷಗಳ ಅಂಕಪಟ್ಟಿಗಳು (ಸುತ್ತೋಲೆ ಪ್ಯಾರ 5(ಋ) ರಂತೆ) | |
| 6. | ಬಿ.ಇ ವ್ಯಾಸಂಗದ ಅವಧಿಯ ಮಧ್ಯದಲ್ಲಿ ಮೊಟಕುಗೊಂಡಿದ್ದರೆ, ಪ್ರತ್ಯೇಕ ವಿವರಣೆ ಪತ್ರ ಮತ್ತು ಪ್ರಿನ್ಸಿಪಾಲರ ಶಿಫಾರಸ್ಸು | |

**ಈ ಮೇಲೆ ತಿಳಿಸಿರುವ ಎಲ್ಲಾ ಮಾಹಿತಿಗಳು ಸತ್ಯವೆಂದು ಪ್ರಮಾಣೀಕರಿಸಲಾಗಿದೆ.**

**ವಿದ್ಯಾರ್ಥಿಯ ತಂದೆ/ತಾಯಿ**
**ಪೋಷಕರ ಸಹಿ (ತಾಯಿ/ತಂದೆ ಇಲ್ಲದಿದ್ದರೆ)**

**ವಿದ್ಯಾರ್ಥಿಯ ಸಹಿ**
ದಿನಾಂಕ:

ವಿದ್ಯಾರ್ಥಿಯು ಮೆರಿಟ್ ಸೀಟು ಪಡೆದಿರುತ್ತಾರೆಂದು ಯಾವುದೇ ವಂತಿಗೆ ಪಡೆದಿಲ್ಲವೆಂದು ದೃಢೀಕರಿಸಿದೆ. ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆಃ ಶಿಫಾರಸ್ಸು ಮಾಡಿದೆ ಹಾಗೂ ಬೇರೆ ಯಾವುದೇ ವಿದ್ಯಾರ್ಥಿವೇತನವನ್ನಾಗಲಿ, ಶುಲ್ಕ ವಿನಾಯಿತಿಯನ್ನಾಗಲಿ ಪಡೆದಿರುವುದಿಲ್ಲ ವೆಂದು ದೃಢೀಕರಿಸಿದೆ.

**ಪ್ರಿನ್ಸಿಪಾಲರ ಸಹಿ**
**(ಮೊಹರು)**

## ಅನುಬಂಧ-1 ಎ

**ಕಾಲೇಜಿನ ಹೆಸರು**------------------------------------------------------------------------

**2013-14** ನೇ ಸಾಲಿಗೆ **ಪರಿಶಿಷ್ಟ** ಜಾತಿ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರಾತಿಗೆ ಪ್ರಸ್ತಾಪನೆ ಕಳುಹಿಸಲು ವಿವರಣಾ ಪಟ್ಟಿ.

| ಕ್ರ. ಸಂ. | ವಿದ್ಯಾರ್ಥಿಯ ಹೆಸರು | ಕೋರ್ಸ್ ಮತ್ತು ವರ್ಷ | **ಯಾವ ಸರ್ಕಾರಿ ಕೋಟಾದಲ್ಲಿ ಪ್ರವೇಶ ಪಡೆದಿರುತ್ತಾರೆ** | **ಸಿಇಟಿ ನೋಂದಣಿ ಸಂಖ್ಯೆ, ರ್‍ಯಾಂಕ್ ಮತ್ತು ಪ್ರವೇಶ ಪಡೆದ ವರ್ಷ** | ಜಾತಿ ಮತ್ತು ಪಂಗಡವನ್ನು ಸೂಚಿಸಬೇಕು | ವಿದ್ಯಾರ್ಥಿಯು ಹಿಂದಿನ ವರ್ಷದಲ್ಲಿ ತೇರ್ಗಡೆಯಾಗಿ ದ್ದಾನೆಯೇ/ಅರ್ಹನಾಗಿ ದ್ದಾನೆಯೇ | ವಿದ್ಯಾರ್ಥಿಯು ಅರ್ಜಿಯನ್ನು ಹೊಸದಾಗಿ ಅಥವಾ ನವೀಕರಿಸು ವುದಕ್ಕೋ ನವೀಕರಿಸಿದ್ದಲ್ಲಿ ಹಿಂದಿನ ವರ್ಷದ ಮಂಜೂರಾತಿ ಆದೇಶ ಕ್ರ.ಮತ್ತು ದಿನಾಂಕ: | ಈ ವಿನಾಯಿತಿಗೆ ಅರ್ಹತೆ ಇದೆಯೇ | ವಿದ್ಯಾರ್ಥಿಗೆ ಬೇರೆ ಯಾವುದಾದರು ವಿದ್ಯಾರ್ಥಿ ವೇತನ ಪಡೆಯುತ್ತಿದ್ದರೆ ವಿವರ |
|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** |
| 1. | | | | | | | | | |
| 2. | | | | | | | | | |
| 3. | | | | | | | | | |
| 4. | | | | | | | | | |

<u>ಸಂಸ್ಥೆಯ ಪ್ರಿನ್ಸಿಪಾಲರು ದೃಢೀಕರಿಸಬೇಕಾದ ಪ್ರಮಾಣ ಪತ್ರಗಳು</u>

೦೧. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳ ತರಗತಿ ಹಾಜರಾತಿ, ನಡತೆ ಮತ್ತು ಪ್ರಗತಿ ತೃಪ್ತಿಕರವಾಗಿದೆ. ಮೇಲ್ಕಂಡ ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆಂದು ದೃಢೀಕರಿಸಿದೆ.

೦೨. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಬೇರೆ ಯಾವ ಶುಲ್ಕ ವಿನಾಯಿತಿ/ ವಿದ್ಯಾರ್ಥಿ ವೇತನ ದೊರೆಯುತ್ತಿಲ್ಲ.

೦೩. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಹಣವನ್ನು ಬೇರೆ ಯಾವ ಬಿಲ್‌ನಲ್ಲೂ ಕ್ಲೈಮ್ ಮಾಡಿರುವುದಿಲ್ಲ.

೦೪. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಕಾಲೇಜಿನ ಪ್ರವೇಶದ ದಾಖಲೆಯಲ್ಲಿರುವಂತೆ **ಪರಿಶಿಷ್ಟ ಜಾತಿಗೆ** ಸೇರಿದವರಾಗಿರುತ್ತಾರೆ.

೦೫. ಮುಂದೆ ಕೋರಿಕೆಯಲ್ಲಿ ಏನಾದರೂ ತಪ್ಪಿದ್ದಲ್ಲಿ ಅಂತಹ ಹಣವನ್ನು ಸಂಸ್ಥೆಯ ಅಧಿಕಾರಿಗಳು ಸರ್ಕಾರಕ್ಕೆ ಮರುಪಾವತಿ ಮಾಡುತ್ತೇವೆಂದು ಪ್ರಮಾಣೀಕರಿಸಿದೆ.

೦೬. ವಿದ್ಯಾರ್ಥಿಯ ಹೇಳಿಕೆ ಹಾಗೂ ದಾಖಲೆಗಳಲ್ಲಿ ಮುಂದೆ ಏನಾದರೂ ತಪ್ಪೆಂದು ತಿಳಿದು ಬಂದಲ್ಲಿ ಪಡೆದಿರುವ ಶುಲ್ಕ ವಿನಾಯಿತಿಯ ಮೊಬಲಗನ್ನು ವಾಪಸ್ಸು ಸಂದಾಯ ಮಾಡುತ್ತೇವೆಂದು ಪಟ್ಟಿಯಲ್ಲಿರುವ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪಡೆಯಲಾಗಿದೆ.

೦೭. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಪಡೆಯುವಾಗ ಯಾವ ವಂತಿಗೆ ಹಣವನ್ನು ಪಡೆದಿಲ್ಲ.

೦೮. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದಲ್ಲಿ ಖಾಯಂ ವಾಸಸ್ಥರಾಗಿದ್ದಾರೆ ಮತ್ತು ನಿಯಮಾನುಸರ ವ್ಯಾಸಂಗ ಮಾಡಿರುತ್ತಾರೆ.

೦೯. ಹಿಂದಿನ ವರ್ಷದಲ್ಲಿ ಮಂಜೂರಾಗಿದ್ದ ಶುಲ್ಕ ವಿನಾಯಿತಿಯ ಹಣವನ್ನು ವಿದ್ಯಾರ್ಥಿಗಳಿಗೆ ಪೂರ್ತಿಯಾಗಿ ಮರುಪಾವತಿ ಮಾಡಲಾಗಿದೆ. ಪಾವತಿ ಮಾಡಿದ ಸ್ಟ್ಯಾಂಪ್ ರಶೀದಿ ನಿರ್ದೇಶಕರು ತಾಂ.ಶಿ.ಇಲಾಖೆ ಇವರಿಗೆ ಕಳುಹಿಸಿ ಕೊಡಲಾಗಿದೆ. ಕ್ರ. ಸಂ.---------------------------------------- ದಿನಾಂಕ:----------.

೧೦. ಪಾವತಿ ಮಾಡಲು ಸಾಧ್ಯವಾಗದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿ ಚಲನ್ ಕಾಪಿಯನ್ನು ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರ ಕಛೇರಿಗೆ ಕಳುಹಿಸಿದೆ ಎಂದು ದೃಢೀಕರಿಸಿದ ಕ್ರ. ಸಂ. ----------------------------ದಿನಾಂಕ:------------------.

೧೧. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಮೆರಿಟ್ ಸೀಟು ಪಡೆದವರೆಂದು ದೃಢೀಕರಿಸಲಾಗಿದೆ.

೧೨. ಶಿಫಾರಸ್ಸು ಮಾಡಿರುವ **ಪರಿಶಿಷ್ಟ ಜಾತಿ** ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕ ಪಡೆದಿಲ್ಲ ಮತ್ತು ಸಿ.ಇ.ಟಿ ಪ್ರವೇಶ ಘಟಕದಿಂದ ಪಡೆದಿರುವ ಶುಲ್ಕ ಹೊರತುಪಡಿಸಿ ಕ್ಲೇಮು ಮಾಡಲಾಗಿದೆ.

ದಿನಾಂಕ:

ಸ್ಥಳ: **ಪ್ರಿನ್ಸಿಪಾಲರ ಸಹಿ ಮತ್ತು ಮೊಹರು.**

# ಅನುಬಂಧ-1 ಬಿ

**ಕಾಲೇಜಿನ ಹೆಸರು**--------------------------------------------------------------------------------

**2013-14** ನೇ ಸಾಲಿಗೆ **ಪರಿಶಿಷ್ಟ** ಪಂಗಡ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರಾತಿಗೆ ಪ್ರಸ್ತಾವನೆ ಕಳುಹಿಸಲು ವಿವರಣಾ ಪಟ್ಟಿ.

| ಕ್ರ. ಸಂ. | ವಿದ್ಯಾರ್ಥಿಯ ಹೆಸರು | ಕೋರ್ಸ್ ಮತ್ತು ವರ್ಷ | ಯಾವ ಸರ್ಕಾರಿ ಕೋಟಾದಲ್ಲಿ ಪ್ರವೇಶ ಪಡೆದಿರುತ್ತಾರೆ | ಸಿಇಟಿ ನೋಂದಣಿ ಸಂಖ್ಯೆ, ರ್‍ಯಾಂಕ್ ಮತ್ತು ಪ್ರವೇಶ ಪಡೆದ ವರ್ಷ | ಜಾತಿ ಮತ್ತು ಪಂಗಡವನ್ನು ಸೂಚಿಸಬೇಕು | ವಿದ್ಯಾರ್ಥಿಯು ಹಿಂದಿನ ವರ್ಷದಲ್ಲಿ ತೇರ್ಗಡೆಯಾಗಿ ದ್ದಾನೆಯೇ/ಅರ್ಹನಾಗಿ ದ್ದಾನೆಯೇ | ವಿದ್ಯಾರ್ಥಿಯು ಅರ್ಜಿಯನ್ನು ಹೊಸದಾಗಿ ಅಥವಾ ನವೀಕರಿಸು ವುದಕ್ಕೋ ನವೀಕರಿಸಿದ್ದಲ್ಲಿ ಹಿಂದಿನ ವರ್ಷದ ಮಂಜೂರಾತಿ ಆದೇಶ ಕ್ರ.ಮತ್ತು ದಿನಾಂಕ: | ಈ ವಿನಾಯಿತಿಗೆ ಅರ್ಹತೆ ಇದೆಯೇ | ವಿದ್ಯಾರ್ಥಿಗೆ ಬೇರೆ ಯಾವುದಾದರು ವಿದ್ಯಾರ್ಥಿ ವೇತನ ಪಡೆಯುತ್ತಿದ್ದರೆ ವಿವರ |
|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** |
| 1. | | | | | | | | | |
| 2. | | | | | | | | | |
| 3. | | | | | | | | | |
| 4. | | | | | | | | | |

<u>ಸಂಸ್ಥೆಯ ಪ್ರಿನ್ಸಿಪಾಲರು ದೃಢೀಕರಿಸ ಬೇಕಾದ ಪ್ರಮಾಣ ಪತ್ರಗಳು</u>

೦೧. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳ ತರಗತಿ ಹಾಜರಾತಿ, ನಡತೆ ಮತ್ತು ಪ್ರಗತಿ ತೃಪ್ತಿಕರವಾಗಿದೆ. ಮೇಲ್ಕಂಡ ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆಂದು ಧೃಢೀಕರಿಸಿದೆ.

೦೨. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಬೇರೆ ಯಾವ ಶುಲ್ಕ ವಿನಾಯಿತಿ/ ವಿದ್ಯಾರ್ಥಿ ವೇತನ ದೊರೆಯುತ್ತಿಲ್ಲ.

೦೩. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಹಣವನ್ನು ಬೇರೆ ಯಾವ ಬಿಲ್‌ನಲ್ಲೂ ಕ್ಲೈಮ್ ಮಾಡಿರುವುದಿಲ್ಲ.

೦೪. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಕಾಲೇಜಿನ ಪ್ರವೇಶದ ದಾಖಲೆಯಲ್ಲಿರುವಂತೆ **ಪರಿಶಿಷ್ಟ ಪಂಗಡಗಳಿಗೆ** ಸೇರಿದವರಾಗಿರುತ್ತಾರೆ.

೦೫. ಮುಂದೆ ಕೋರಿಕೆಯಲ್ಲಿ ಏನಾದರೂ ತಪ್ಪಿದ್ದಲ್ಲಿ ಅಂತಹ ಹಣವನ್ನು ಸಂಸ್ಥೆಯ ಅಧಿಕಾರಿಗಳು ಸರ್ಕಾರಕ್ಕೆ ಮರುಪಾವತಿ ಮಾಡುತ್ತೇವೆಂದು ಪ್ರಮಾಣೀಕರಿಸಿದೆ.

೦೬. ವಿದ್ಯಾರ್ಥಿಯ ಹೇಳಿಕೆ ಹಾಗೂ ದಾಖಲೆಗಳಲ್ಲಿ ಮುಂದೆ ಏನಾದರೂ ತಪ್ಪೆಂದು ತಿಳಿದು ಬಂದಲ್ಲಿ ಪಡೆದಿರುವ ಶುಲ್ಕ ವಿನಾಯಿತಿಯ ಮೊಬಲಗನ್ನು ವಾಪಸ್ಸು ಸಂದಾಯ ಮಾಡುತ್ತೇವೆಂದು ಪಟ್ಟಿಯಲ್ಲಿರುವ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪಡೆಯಲಾಗಿದೆ.

೦೭. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಪಡೆಯುವಾಗ ಯಾವ ವಂತಿಗೆ ಹಣವನ್ನು ಪಡೆದಿಲ್ಲ.

೦೮. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದಲ್ಲಿ ಖಾಯಂ ವಾಸಸ್ಥರಾಗಿದ್ದಾರೆ ಮತ್ತು ನಿಯಮಾನುಸರ ವ್ಯಾಸಂಗ ಮಾಡಿರುತ್ತಾರೆ.

೦೯. ಹಿಂದಿನ ವರ್ಷದಲ್ಲಿ ಮಂಜೂರಾಗಿದ್ದ ಶುಲ್ಕ ವಿನಾಯಿತಿಯ ಹಣವನ್ನು ವಿದ್ಯಾರ್ಥಿಗಳಿಗೆ ಪೂರ್ತಿಯಾಗಿ ಮರುಪಾವತಿ ಮಾಡಲಾಗಿದೆ. ಪಾವತಿ ಮಾಡಿದ ಸ್ಟ್ಯಾಂಪ್ ರಶೀದಿ ನಿರ್ದೇಶಕರು ತಾಂ.ಶಿ.ಇಲಾಖೆ ಇವರಿಗೆ ಕಳುಹಿಸಿ ಕೊಡಲಾಗಿದೆ. ಕ್ರ. ಸಂ.----------------------------------------- ದಿನಾಂಕ:----------.

೧೦. ಪಾವತಿ ಮಾಡಲು ಸಾಧ್ಯವಾಗದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿ ಚಲನ್ ಕಾಪಿಯನ್ನು ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರ ಕಛೇರಿಗೆ ಕಳುಹಿಸಿದೆ ಎಂದು ದೃಢೀಕರಿಸಿದ ಕ್ರ. ಸಂ. ---------- ----------------ದಿನಾಂಕ:--------------------.

೧೧. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಮೆರಿಟ್ ಸೀಟು ಪಡೆದವರೆಂದು ದೃಢೀಕರಿಸಲಾಗಿದೆ.

೧೨. ಶಿಫಾರಸ್ಸು ಮಾಡಿರುವ **ಪರಿಶಿಷ್ಟ ಪಂಗಡದ** ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕ ಪಡೆದಿಲ್ಲ ಮತ್ತು ಸಿ.ಇ.ಟಿ ಪ್ರವೇಶ ಘಟಕದಿಂದ ಪಡೆದಿರುವ ಶುಲ್ಕ ಹೊರತುಪಡಿಸಿ ಕ್ಲೇಮು ಮಾಡಲಾಗಿದೆ.

ದಿನಾಂಕ:

ಸ್ಥಳ:

**ಪ್ರಿನ್ಸಿಪಾಲರ ಸಹಿ ಮತ್ತು ಮೊಹರು.**

**(TO BE PREPARED IN MS-EXCEL & LOADED IN CD)**

***Annexure***

College Name:

Office order No.________________________ dated: ____________

***List of SC students whose parents annual income is more than ₹ 2.5 Lakhs and who are being sanctioned Fee concession for the year 2013-14.***

| **Sl. No.** | **Name of the student** | **Semester studying** | **Course** | **Caste** | **Fresh/ Renewal** | **Govt. quota* under which student got admission** | | | | | |
|---|---|---|---|---|---|---|---|---|---|---|---|
| | | | | | | | | | | | |
| | | | | | | | | | | | |
| | | | | | | | | | | | |

***List of ST students whose parents annual income is more than ₹ 2.5Lakhs and who are being sanctioned Fee concession for the year 2013-14.***

| **Sl. No.** | **Name of the student** | **Semester studying** | **Course** | **Caste** | **Fresh/ Renewal** | **Govt. quota* under which student got admission** | | | | | |
|---|---|---|---|---|---|---|---|---|---|---|---|
| | | | | | | | | | | | |
| | | | | | | | | | | | |
| | | | | | | | | | | | |

*** Mention Govt. quota: free/lower fees/higher fees**